

**'ಯೇ... ಅವ್ಳು ಒಪ್ಕೊಂಡ್‌ಬಿಟ್ಳು!'** ಹುಡುಗಿ ಪ್ರೇಮನಿವೇದನೆಗೆ ಒಪ್ಪಿಕೊಂಡ ಕ್ಷಣದಲ್ಲಿ ಹೀರೊ ಜಿಗಿಯುವ ಹಾಗೆ ಜಿಗಿದು ಪೋಸ್ ಕೊಡುತ್ತಿರುವ ಈ ಹಾರು ಜಿಂಕೆ (Springbok), ಸ್ಪೇನ್‌ನ **ಲೂಸಿ ಬೆವೆರಿಡ್ಜ್** ಅವರ ಕಣ್ಣಿಗೆ ಬಿದ್ದಿದ್ದು ದಕ್ಷಿಣ ಆಫ್ರಿಕಾದ ಗಲಗಾಡಿ ಟ್ರಾನ್ಸ್‌ಫ್ರಂಟಿಯರ್ ಪಾರ್ಕ್‌ನಲ್ಲಿ. ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವುದಕ್ಕಾಗಿ, ಅದರ ಮೂಲಕ ಸಂಗಾತಿಗಳನ್ನು ಆಕರ್ಷಿಸುವುದಕ್ಕಾಗಿ ಇಷ್ಟೆಲ್ಲ ಹಾರಾಟ ನಡೆಸುವ ಈ ಪ್ರಾಣಿಗಳಿಗೆ 'ನೆಲದ ಮೇಲೆ ಕಾಲೇ ನಿಲ್ಲೋದಿಲ್ಲ' ಎಂಬ ಮಾತು ಚೆನ್ನಾಗಿ ಅನ್ವಯಿಸುತ್ತದಲ್ಲವೇ?

## 'ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ ಅವಾರ್ಡ್'

ಇದನ್ನು ಕೇಳಿದ ತಕ್ಷಣ ವೈಲ್ಡ್‌ಲೈಫ್ ಫೋಟೊಗ್ರಾಫರ್‌ಗಳ ಮುಖದಲ್ಲಿ ನಗುವೊಂದು ಹಾದುಹೋಗುತ್ತದೆ. ಅದು ಅವರ ತಪ್ಪಲ್ಲ; ಆ ಹೆಸರಿನ ಜೊತೆಗೇ ಮನಸಲ್ಲಿ ಸರಿದುಹೋಗುವ ಹತ್ತಾರು ಫೋಟೊಗಳನ್ನು ನೋಡಿದರೆ ನಾವೂ ಹೊಟ್ಟೆ ಹುಣ್ಣಾಗುವ ಹಾಗೆ ನಗಬೇಕು.

ಜೋಕ್‌ಗಳಲ್ಲಿ ನಾವು ಪ್ರಾಣಿಗಳ್ನು ಹಿಗ್ಗಾಮುಗ್ಗಾ ಬಳಸಿಕೊಳ್ಳುತ್ತೇವೆ. ಸಿನಿಮಾಗಳಲ್ಲಿ ಪ್ರಾಣಿಗಳನ್ನು ಇಟ್ಟುಕೊಂಡು ಹಾಸ್ಯ ಉಕ್ಕಿಸುವ ಪ್ರಯತ್ನಗಳಂತೂ ಹಳಸಲು ಎನ್ನಿಸುವಷ್ಟು ಸವಕಲಾಗಿದೆ. ಪ್ರಾಣಿಗಳನ್ನು ಇಟ್ಟುಕೊಂಡು ನಾವು ಹಾಸ್ಯ ಮಾಡುವುದಕ್ಕಿಂತ, ಅವರನ್ನು ಅವರಷ್ಟಕ್ಕೆ ಬಿಟ್ಟು ಸುಮ್ಮನೆ ನೋಡುತ್ತ ನಿಂತರೆ ಅವರೂ ನಮ್ಮ ಯಾವ ಹಾಸ್ಯ ಕಲಾವಿದರಿಗೂ ಕಮ್ಮಿಯಿಲ್ಲದ ಹಾಗೆ ಕಾಮಿಡಿ ಮಾಡಬಲ್ಲವು! ಪ್ರಾಣಿಗಳೂ ಕಾಮಿಡಿ ಮಾಡುತ್ತವೆಯೇ? ಸುಮ್ನೆ ಬುರುಡೆ ಬಿಡಬೇಡಿ. ನೀವು ಹೇಳಿದ್ದೆಲ್ಲ ನಂಬಲು ನಾವೇನು ಕುರಿಗಳಲ್ಲ ಎಂದು ನಗಬೇಡಿ. ಇಲ್ಲಿನ ಚಿತ್ರಗಳ ಮೇಲೆ ಒಮ್ಮೆ ಕಣ್ಣಾಡಿಸಿ. ನಗುವಿನ ಹೊಸ ನಮೂನೆಗಳು ನಿಮಗೇ ಗೊತ್ತಿಲ್ಲದೆ ನಿಮ್ಮ ತುಟಿಗಳಿಂದ ಹೊಮ್ಮದಿದ್ದರೆ ಕೇಳಿ.



**ಅಮ್ಮಾ...!** ಬಂಡೆಗಲ್ಲ ಹಾಗೆ ನಿಂತಿರುವ ಅಮ್ಮನ ಕಿವಿಯಲ್ಲಿ ಪುಟಾಣಿ ಹೇಳುತಿರುವುದು ಏನನ್ನು? ನೀರಾನೆಗಳ ಕರುಳಬಳ್ಳಿಯ ಸಬಂಧಕ್ಕೊಂದು ಫ್ರೇಮ್ ತೊಡಿಸಿರುವುದು ಭಾರತದವರೇ ಆದ **ರೋಹಿನ್ ಬಕ್ಷಿ.**



**ಸಿಂಹರಾಜನ ಶವಾಸನ!** ತಾಂಜೇನಿಯಾ ನ್ಯಾಷನಲ್ ಪಾರ್ಟ್‌ನಲ್ಲಿ ಆಕಾಶಮುಖಿಯಾಗಿ ಮಲಗಿದ ಸಿಂಹದ ಈ ಚಿತ್ರ ಸೆರೆಯಾಗಿದ್ದು ಇಟಲಿಯ **ಗಿಯೊವಾನ್ನಿ** ಅವರ ಕ್ಯಾಮೆರಾದಲ್ಲಿ

## ನೀವೂ ಭಾಗವಹಿಸಬಹುದು!

2021ರ 'ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ ಅವಾರ್ಡ್' ಸ್ಪರ್ಧೆಗೆ ನೀವೂ ಫೋಟೊಗಳನ್ನು ಕಳಿಸಿಕೊಡಬಹುದು. ಜೂನ್ 30 ಪ್ರವೇಶಗಳ ಸ್ವೀಕಾರಕ್ಕೆ ಕೊನೆಯ ದಿನ. ಪ್ರವೇಶ ಉಚಿತ. ಭೂಮಿ, ಗಾಳಿ, ಪೋರ್ಟ್‌ಫೋಲಿಯೊ, ಜಲಾಂತರ್ಗಾಮಿ ಮತ್ತು ವಿಡಿಯೊ ಹಾಗೂ ಜ್ಯೂನಿಯರ್ ಫೋಟೊಗ್ರಾಪರ್ ಎಂಬ ಆರು ವಿಭಾಗಗಳಲ್ಲಿ ಈ ಸ್ಪರ್ಧೆ ನಡೆಯುತ್ತದೆ. ಒಬ್ಬ ಛಾಯಾಗ್ರಾಹಕ ಎಲ್ಲ ವಿಭಾಗಗಳಲ್ಲಿಯೂ ಸೇರಿ ಒಟ್ಟು ಹತ್ತು ಛಾಯಾಚಿತ್ರಗಳನ್ನು ಕಳಿಸಿಕೊಡಬಹುದು. 16 ವರ್ಷ ಮತ್ತು ಅದಕ್ಕಿಂತ ಚಿಕ್ಕ ವಯಸ್ಸಿನ ಛಾಯಾಗ್ರಾಹಕರಿಗಾಗಿ (ಜ್ಯೂನಿಯರ್ ಫೋಟೊಗ್ರಾಫರ್ ವಿಭಾಗ) ವಿಶೇಷ ವಿಭಾಗ ಇರುತ್ತದೆ.

ನೀವು ತೆಗೆದ ಛಾಯಾಚಿತ್ರ 'ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ ಅವಾರ್ಡ್' ಪಡೆದುಕೊಂಡರೆ ಜಗತ್ತಿನಾದ್ಯಂತ ನಿಮ್ಮ ಛಾಯಾಚಿತ್ರ ಸದ್ದುಮಾಡುವುದಲ್ಲದೆ, ಒಂದು ವಾರ ಕಾಲದ ಕೀನ್ಯಾದ ಮಸಾಯಿ ಮಾರಾ ಸಫಾರಿಯ ಅವಕಾಶ ನಿಮ್ಮದಾಗುತ್ತದೆ. ನಿಮ್ಮ ಚಿತ್ರಗಳನ್ನು ಕಳಿಸಿಕೊಡಲು ಮತ್ತು ಹೆಚ್ಚಿನ ಮಾಹಿತಿಗಾಗಿ comedywildlifephoto.com ಜಾಲತಾಣಕ್ಕೆ ಭೇಟಿ ನೀಡಿ.